ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 5, March-April, 2024, Pp. 59-63.
©*IIMRD*, Mysuru
IIMRD JOURNALS
www.iimrd.com

# ಹೊಳೆನರಸೀಪುರ ಪ್ರದೇಶದ ಶಾಸನೋಕ್ತ ಸ್ಮಾರಕ ಶಿಲ್ಪಗಳು

**ಡಾ.ತ್ರಿವೇಣಿ ಅರಸ್**
ಸಹಾಯಕ ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಮಂಗಳೂರು.

**ಸಾರಾಂಶ: (Abstract)**

*ಹೊಳೆನರಸೀಪುರ ಪ್ರದೇಶದಲ್ಲಿ ಕಂಡುಬರುವ ಸ್ಮಾರಕ ಶಿಲ್ಪಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಈ ಪ್ರದೇಶವನ್ನು ಕದಂಬರು, ಗಂಗರು, ಚೋಳರು, ಹೊಯ್ಸಳರು, ಕೊಂಗಾಳ್ವರು, ವಿಜಯನಗರ ಸಾಮ್ರಾಜ್ಯದ ಅರಸರು ಮತ್ತು ಸ್ಥಳೀಯ ಆಡಳಿತಗಾರರು, ಅಮರನಾಯಕರು ಆಡಳಿತ ನಡೆಸಿರುವುದು ಈ ಪ್ರದೇಶದ ದೊರೆತಿರುವ ಶಾಸನಗಳಿಂದ ತಿಳಿದುಬರುತ್ತದೆ. ಈ ಪ್ರದೇಶದ ಸ್ಮಾರಕ ಶಿಲ್ಪಗಳನ್ನು ಅಧ್ಯಯನ ಮಾಡಿದಾಗ ಸ್ಮಾರಕ ಶಿಲ್ಪಗಳ ರಚನೆಯ ಸಂಸ್ಕೃತಿಗೆ ಗಂಗರು, ಕೊಂಗಾಳ್ವರು ಹೊಳೆನರಸೀಪುರ ಪ್ರದೇಶದಲ್ಲಿ ಅಸ್ಥಿಭಾರ ಹಾಕಿರುವುದು ತಿಳಿದುಬರುತ್ತದೆ. ನಂತರ ಕಾಲಘಟ್ಟದಲ್ಲಿ ಆಳ್ವಿಕೆ ಮಾಡಿದ ಹೊಯ್ಸಳರು, ವಿಜಯನಗರ ಸಾಮ್ರಾಜ್ಯದ ಅರಸರು ಅವುಗಳನ್ನು ಮುಂದುವರೆಸಿಕೊಂಡು ಬಂದರು. ಹೊಯ್ಸಳರು ಈ ಸಂಸ್ಕೃತಿಯನ್ನು ಉತ್ತುಂಗ ಶಿಖರಕ್ಕೆ ಏರಿಸಿರುವುದು ಕಂಡುಬರುತ್ತದೆ. ಹೊಳೆನರಸೀಪುರ ಪ್ರದೇಶದಲ್ಲಿ ಕ್ರಿ.ಶ. 10ನೇ ಶತಮಾನದಿಂದ ಸ್ಮಾರಕ ಶಿಲ್ಪಗಳನ್ನು ರಚಿಸುವ ಸಂಸ್ಕೃತಿಗೆ ನಾಂದಿ ಹಾಕಿರುವುದು ಇಲ್ಲಿಯ ಶಾಸನಗಳಿಂದ ತಿಳಿದುಬರುತ್ತದೆ. ಸ್ಮಾರಕ ಶಿಲ್ಪಗಳನ್ನು ಹೊಳೆನರಸೀಪುರ ಪ್ರದೇಶದಲ್ಲಿ ಹೆಚ್ಚಾಗಿ ರಚಿಸಿರುವ ಕೀರ್ತಿ ಹೊಯ್ಸಳ ಸಾಮ್ರಾಜ್ಯಕ್ಕೆ ಸಲ್ಲುತ್ತದೆ. ಇದರಿಂದ ಈ ಪ್ರದೇಶದ ಮೇಲೆ ಹಿಡಿತ ಸಾಧಿಸಿದ ಸಾಮ್ರಾಜ್ಯಗಳ ಪೈಕಿ ಹೆಚ್ಚಿನ ಶ್ರೇಯಸ್ಸು ಹೊಯ್ಸಳ ಸಾಮ್ರಾಜ್ಯಕ್ಕೆ ಸಲ್ಲುತ್ತದೆ.*

**ಮುಖ್ಯಪದಗಳು (Keywords):** ಸ್ಮಾರಕ ಶಿಲ್ಪಗಳು, ಕೊಂಗಾಳ್ವರು, ಗಂಗರು, ಹೊಯ್ಸಳರು, ನಿಡುವಣಿ.

**ಪೀಠಿಕೆ**

ಹೊಳೆನರಸೀಪುರ ತಾಲೂಕಿನ ನಿಡುವಣಿ ಗ್ರಾಮದ ಉತ್ತರಕ್ಕಿರುವ ಹೊಲವೊಂದರಲ್ಲಿ ನೆಟ್ಟಿರುವ ವೀರಗಲ್ಲನ್ನು ಈ ಪ್ರದೇಶದಲ್ಲಿ ನಿಲ್ಲಿಸಲಾದ ಮೊದಲ ಸ್ಮಾರಕ ಶಿಲ್ಪವಾಗಿದೆ. ಏಕೆಂದರೆ ಈ ವೀರಗಲ್ಲನ್ನು ಕ್ರಿ.ಶ.10ನೇ ಶತಮಾನದಲ್ಲಿ ನಿರ್ಮಾಣ ಮಾಡಲಾಗಿದೆ. ಈ ವೀರಗಲ್ಲು ಬಿದರಕ್ಕದ ಎಚ್ಚೆಗಾಮಣ್ಣ ಎಂಬ ವ್ಯಕ್ತಿಯು ಕಾಡು ಪ್ರಾಣಿಯನ್ನು ಕೊಂದು ನಂತರ ಸಾವಿಗೆ ಶರಣಾಗುತ್ತಾನೆ. ಇವನ ಸ್ಮರಣೆಗೋಸ್ಕರ ಸ್ಮಾರಕ ಕಲ್ಲನ್ನು ನಿರ್ಮಿಸಲಾಯಿತು. ಜೊತೆಗೆ ಆ ವೀರನನ್ನು *'ಏರಗ ಮಣ್ಣಂ'* ಎಂದು ಉಲ್ಲೇಖಿಸಲಾಗಿದೆ. ಈ ಸ್ಮಾರಕ ಶಾಸನವು *'ದುಡ್ಡೊಡೆಯ'* ಎಂಬ ಮುಖ್ಯಸ್ಥನ ಹೆಸರನ್ನು ಸೂಚಿಸುತ್ತದೆ. ಅಂದರೆ ಬಿದರಕ್ಕದ ಆಗಿನ ಮುಖ್ಯಸ್ಥ ಇದರ ಜೊತೆಗೆ ಈ ಸ್ಮಾರಕ ಶಿಲ್ಪವು ಕಾಡುಪ್ರಾಣಿಯ ಬೇಟೆಯನ್ನು ವರ್ಣಿಸುತ್ತದೆ. ಕ್ರಿ.ಶ. 970

*Please cite this article as:* ತ್ರಿವೇಣಿ ಅರಸ್. (2024). ಹೊಳೆನರಸೀಪುರ ಪ್ರದೇಶದ ಶಾಸನೋಕ್ತ ಸ್ಮಾರಕ ಶಿಲ್ಪಗಳು. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ,* 5(5). ಪು.ಸಂ. 59–63

ಏಪ್ರಿಲ್ 24, 10ನೇ ಶತಮಾನಕ್ಕೆ ಸೇರಿದ ಮತ್ತೊಂದು ಸ್ಮಾರಕ ಕಲ್ಲು ಅದೇ ಸ್ಥಳದಲ್ಲಿ ದೊರೆತಿದ್ದು ನಿಡುವಣೆಯಲ್ಲಿ ನಡೆದ ದನಕರುಗಳ ಲೂಟಿಯ ಸಮಯದಲ್ಲಿ ಬಿದರಕ್ಕದ ಎಚ್ಚಗಾಮಣ್ಣನ ಕಿರಿಯ ತಮ್ಮನಾದ ಕೆಂಚನ ವೀರ ಮರಣದ ಬಗ್ಗೆ ವಿವರಿಸುತ್ತದೆ. ಇಂದು ಈ ಸ್ಮಾರಕ ಶಿಲ್ಪಗಳು ತನ್ನ ನೈಜ್ಯತೆಯನ್ನು ಕಳೆದುಕೊಂಡಿವೆ. ಹಳ್ಳಿ ಮೈಸೂರು ಕೆರೆಯ ಅಂಗಳದಲ್ಲಿ ಬಿದ್ದಿದ್ದ ವೀರಗಲ್ಲು 10ನೇ ಶತಮಾನಕ್ಕೆ ಸೇರಿದ್ದು, ಗಂಗರ ಅರಸ ಮಾರಸಿಂಗನಿಗೆ ಸಂಬಂಧಿಸಿದ್ದು ದನಕರುಗಳನ್ನು ಲೂಟಿ ಮಾಡಿರುವುದರ ಬಗ್ಗೆ ಉಲ್ಲೇಖಿಸಲಾಗಿದೆ. ಆದರೆ ಯಾರು ಯಾರ ಜೊತೆಯಲ್ಲಿ ಹೋರಾಡಿ ಮಡಿದವರೆಂದು ಸ್ಪಷ್ಟಿಕರಿಸಿಲ್ಲ. ಇಂದು ಈ ಸ್ಮಾರಕದ ಕಲ್ಲು ಕಣ್ಮರೆಯಾಗಿದೆ.[1] ಉದ್ದೂರಿನ ಈಶ್ವರ ದೇವಸ್ಥಾನದೊಳಗೆ ನೆಟ್ಟ ವೀರಗಲ್ಲು ತನ್ನ ತಂದೆ ತಾಯಿಯ ಸವಿನೆನಪಿಗೋಸ್ಕರ ಪದ್ಮನಾಭನ ಮಗ ನಾಡಾಳ್ವ ವಂಶದ ಮಾಹಿನಾಡಾಳ್ವರು ನಿರ್ಮಿಸಿದರು. ಹೊಯ್ಸಳ ಸಾಮ್ರಾಜ್ಯದ ಚಕ್ರವರ್ತಿ ಸೋಮೇಶ್ವರನ ಮಗ ನರಸಿಂಹನ ಪಟ್ಟಾಭಿಷೇಕದ ಬಗ್ಗೆಯೂ ಉಲ್ಲೇಖಿಸಿದ್ದು, ಅದರ ಜೊತೆ ಅಗ್ರಹಾರ ಉದ್ದೂರಿನ ಬೋಳೇಶ್ವರ ಮತ್ತು ಮಾದಾಶೇಷ ಮಹಾಜನರ ಬಗ್ಗೆ ಈ ಸ್ಮಾರಕ ಕಲ್ಲು ವಿವರಿಸುತ್ತದೆ. ಉದ್ದೂರು ಊರ ಬಾಗಿಲು ಮುಂದೆ ನೆಟ್ಟಿರುವ ವೀರಗಲ್ಲು ದನಕರುಗಳ ಲೂಟಿಯ ಸಂದರ್ಭದಲ್ಲಿ Bagoli (ಬಾಗಿಹಳ್ಳಿಯ) ಭೀತ ಎಂಬುವವನ ಮರಣದ ಬಗ್ಗೆ ಉಲ್ಲೇಖಿಸಿದ್ದು, ಮರಣ ಹೊಂದಿದ ವೀರನು ಅಲಯನಾಯಕನೆಂದು ಹೇಳುತ್ತದೆ. ಈ ಸ್ಮಾರಕಕಲ್ಲು ಈಗ ತನ್ನ ನೈಜ್ಯತೆ ಕಳೆದುಕೊಂಡಿದೆ.[2]

ಗುಬ್ಬಿಯ ಗರ್ಗೇಶ್ವರ ದೇವಸ್ಥಾನದ ದಕ್ಷಿಣಕ್ಕೆ ನೆಟ್ಟಿರುವ ವೀರಗಲ್ಲು ಗುಬ್ಬಿ ಗ್ರಾಮಕ್ಕೆ ಸಂಬಂಧಿಸಿದೆ ಎಂದು ಉಲ್ಲೇಖವನ್ನು ಮಾತ್ರ ಒಳಗೊಂಡಿದೆ. ಇಂದು ಈ ಸ್ಮಾರಕ ಕಲ್ಲು ಕಣ್ಮರೆಯಾಗಿದೆ.[3] ಜೋಡಿಗುಬ್ಬಿ ಊರ ಮುಂದಿರುವ ಒಂದನೆಯ ವೀರಗಲ್ಲು 11ನೇ ಶತಮಾನಕ್ಕೆ ಸೇರಿದ್ದು, ಕೊಂಗಾಳ್ವರು ನಡೆಸಿರುವ ಯುದ್ಧಕ್ಕೆ ಸಂಬಂಧಿಸಿದೆ ಎಂಬ ಉಲ್ಲೇಖವಿದೆ. ಕೊಂಗಾಳ್ವರು ಯಾರ ಜೊತೆ ಯುದ್ಧ ಮಾಡಿದರೆಂದು ವಿವರಿಸಿಲ್ಲ. ಅದೇ ಸ್ಥಳದ ಎರಡನೆಯ ವೀರಗಲ್ಲು ಹೆದರಿಗುಪ್ಪೆಗೆ ಸೇರಿದೆ ಎಂದು ಉಲ್ಲೇಖ ಮಾಡಲಾಗಿದೆ. ತವನಂದಿಯ ವೀರಗಲ್ಲು ಕ್ರಿ.ಶ. 1104 ಸೇರಿದ್ದು, ಬೈರಿಶೆಟ್ಟಿ ಎಂಬ ವ್ಯಕ್ತಿಯು ತನ್ನ ವ್ಯಾಪಾರಿಗಳೊಂದಿಗೆ ಪ್ರಯಾಣ ಮಾಡಿ ಕೊಲ್ಲಲ್ಪಡುತ್ತಾನೆ. ಇವನ ಮರಣದ ಸ್ಮರಣೆಗೋಸ್ಕರ ಜಕೇಗೌಡ ಮತ್ತು ಮಂಚೇಗೌಡ ಎಂಬುವವರು ನಿರ್ಮಿಸುತ್ತಾರೆ. ದೇವರ ಮುದ್ದನಹಳ್ಳಿ ಚನ್ನಿಗರಾಯಸ್ವಾಮಿ ದೇವಾಲಯದ ಪ್ರಕಾರದಲ್ಲಿ ಬಾಗಿಲ ಬಲಗಡೆ ನೆಟ್ಟ ವೀರಗಲ್ಲು ಕ್ರಿ.ಶ. 1194 ಸೆಪ್ಟೆಂಬರ್ 26 ಹೊಯ್ಸಳ ಸಾಮ್ರಾಜ್ಯದ ಸಾಮ್ರಾಟನಾದ ಬಲ್ಲಾಳದೇವನ ರಾಜ್ಯಭಾರ ಮತ್ತು 2ನೇ ಬಲ್ಲಾಳ ರಾಜ್ಯಭಾರ ಮಾಡುತ್ತಿದ್ದು ಚಿಕ್ಕಕಾಡುನೂರು ಗ್ರಾಮಕ್ಕೆ ಸಂಬಂಧಿಸಿದೆ. ಮೂಡಲಹಿಪ್ಪೆ ಈಶ್ವರ ದೇವಾಲಯದ ಬಲಭಾಗದಲ್ಲಿರುವ ವೀರಗಲ್ಲು ಕ್ರಿ.ಶ. 1171 ಮೇ 21 ವೀರದುದ್ದ ಕೊಂಗಾಳ್ವ ದೇವನ ಆಡಳಿತ ಕಾಲಕ್ಕೆ ಸಂಬಂಧಿಸಿದ್ದು, ಹೊಯ್ಸಳರ 1ನೇ ನರಸಿಂಹನು ಮಹಾಮಂಡಲೇಶ್ವರ ವೀರದ್ದದ ಕೊಂಗಾಳ್ವನ ನಿಯಂತ್ರಣದಲ್ಲಿದ್ದ ಮೊಲತೆಯ ಬೀಡಿನ ಮೇಲೆ ಯುದ್ಧ ಸಾರುತ್ತಾನೆ. ಇದೇ ಸಮಯದಲ್ಲಿ ವೀರದುದ್ದ ಕೊಂಗಾಳ್ವನ ಆದೇಶದ ಮೇರೆಗೆ ತಮ್ಮದಿಯ ರುದ್ರನು

---

[1] ಕ್ಷೇತ್ರಕಾರ್ಯ

[2] ಅದೇ.

[3] ಅದೇ.

ಹೊಯ್ಸಳರ 1ನೇ ನರಸಿಂಹನ ಮೇಲೆ ಯುದ್ಧ ಮಾಡಿ ಈ ಕದನದಲ್ಲಿ ಕುದುರೆಗಳು, ಆನೆಗಳು ಹಾಗೂ ಸೈನಿಕರನ್ನು ಕೊಂದು ಮುನ್ನಡೆಯುವ ಸಂದರ್ಭದಲ್ಲಿ ವೀರಮರಣ ಹೊಂದುತ್ತಾನೆ. ಅವನ ವೀರತ್ವವನ್ನು ಕಂಡು ಕೊಂಗಾಳ್ವದೇವನು ಕೋಟೆಹಾಳುವನ್ನು ದಾನವಾಗಿ ನೀಡುತ್ತಾನೆ. ತಮ್ಮಡಿಯರುದ್ರನ ಸ್ಮರಣೆಗೋಸ್ಕರ ಸೋಮಯಾಜಿಯ ಹಾಗೂ ಇತರರು ಪರೋಕ್ಷ ವಿನಯ ಹೆಸರಿನಲ್ಲಿ ಈ ಸ್ಮಾರಕ ಶಿಲ್ಪವನ್ನು ನಿರ್ಮಿಸುತ್ತಾರೆ.

ಕಡುವಿನ ಕೋಟೆ ಊರಿನ ಪಶ್ಚಿಮ ನದಿಯ ದಡದಲ್ಲಿ ಅಗಸರ ಕಡುವಿನಲ್ಲಿರುವ ವೀರಗಲ್ಲು 12ನೇ ಶತಮಾನಕ್ಕೆ ಸೇರಿದ್ದು, ಚಾಲುಕ್ಯರ 6ನೇ ವಿಕ್ರಮಾದಿತ್ಯನ ದಂಡನಾಯಕನಾಗಿದ್ದ ಬೋಗಶೆಟ್ಟಿಯು ಹೊಯ್ಸಳ ಸಾಮ್ರಾಜ್ಯದ ಪ್ರಸಿದ್ಧ ಸಾಮ್ರಾಟನಾದ ವಿಷ್ಣುವರ್ಧನನ ಮೇಲೆ ದಾಳಿ ಮಾಡಿದನೆಂದು ಉಲ್ಲೇಖಿಸಿದೆ. ಈ ಸ್ಮಾರಕ ಶಿಲ್ಪವು ಕಣ್ಮರೆಯಾಗಿದೆ.[4] ಹೂವಿನಹಳ್ಳಿ ಈಶ್ವರ ದೇವಸ್ಥಾನದ ಪಕ್ಕದಲ್ಲಿರುವ 1ನೇ ವೀರಗಲ್ಲು ಕ್ರಿ.ಶ. 1172 1ನೇ ಹೊಯ್ಸಳರ ನರಸಿಂಹನ ಕಾಲಕ್ಕೆ ಸೇರಿದ್ದು, ಹೂವಿನ ಹಳ್ಳಿಯ ಬೊಮ್ಮಯ್ಯನಾಯಕನು ಬಲ್ಲಾಳನಿಂದ ಲೂಟಿಗೆ ಒಳಪಟ್ಟಾಗ ಅವರಲ್ಲಿ ಕೆಲವರನ್ನು ಕೊಂದು ಹೋರಾಡುತ್ತಿರುವಾಗ ವೀರಮರಣ ಹೊಂದುತ್ತಾನೆ. ಅವನ ಸ್ಮರಣೆಗೋಸ್ಕರ ಮಾದೇಯನಾಯಕ ಮತ್ತು ಸೂರಯ್ಯನಾಯಕ ತಮ್ಮ ತಂದೆಯ ನೆನಪಿಗಾಗಿ ಪರೋಕ್ಷವಿನಯ ಎಂಬ ಹೆಸರಿನಲ್ಲಿ ಈ ಸ್ಮಾರಕ ಶಿಲ್ಪವನ್ನು ನಿರ್ಮಿಸುತ್ತಾರೆ. ಈ ಸಮಯದಲ್ಲಿ 2ನೇ ಬಲ್ಲಾಳನು ರಾಜಕುಮಾರನಾಗಿದ್ದನೆಂದು ಉಲ್ಲೇಖಿಸಲಾಗಿದೆ. ಅದೇ ಸ್ಥಳದಲ್ಲಿರುವ 2ನೇ ವೀರಗಲ್ಲು ಲೊಕ್ಕಗುಂಡಿಯಲ್ಲಿದ್ದ ಬಿಲ್ಲಮ್ಮರ ಸೇನೆಯನ್ನು ಹಾದಕ್ಕೆ ಕಳುಹಿಸಿದ ಹೊಯ್ಸಳರ ರಾಜಬಲ್ಲಾಳನು ಅದೇ ಸ್ಥಳದಲ್ಲಿ ಮಿಲಿಟರಿ ಶಿಬಿರದಲ್ಲಿ ಬಿಡಾರ ಹೂಡಿರುತ್ತಾನೆ. ಇದೇ ಸಮಯದಲ್ಲಿ ಲೊಕ್ಕಿಗುಂಡಿ ಕೋಟೆಯಲ್ಲಿ ಯುದ್ಧ ಮಾಡುತ್ತಿದ್ದ. ಹೂವಿನಹಳ್ಳಿಯ ಮಹಾಸಾಮಂತನಾಗಿದ್ದ ಕಾಮೇಯನಾಯಕನ ವೀರಮರಣದ ಬಗ್ಗೆ ಉಲ್ಲೇಕ ಕಾಮೇಯನಾಯಕನ ಮಕ್ಕಳಾದ ಮಂಚೇಯನಾಯಕ, ಮಾರೇಯನಾಯಕ ಹಾಗೂ ಹೆಂಡತಿ ಗುಡ್ಡವೆನಾಯಕಿ ಪರೋಕ್ಷವಿನಿಯ ಎಂಬ ಹೆಸರಿನಲ್ಲಿ ಈ ಸ್ಮಾರಕ ಶಿಲ್ಪವನ್ನು ನಿರ್ಮಿಸಿದ್ದಾರೆ. ಹಿರೇಬೆಳಗುಲಿ ಮಲ್ಲೇಶ್ವರ ದೇವಸ್ಥಾನದ ಬಲಗಡೆ ಇರುವ ವೀರಗಲ್ಲು 12–13ನೇ ಶತಮಾನಕ್ಕೆ ಸೇರಿದ್ದು, ಹೊಯ್ಸಳರ ರಾಜನರಸಿಂಹನ ಬದಲು ಯುದ್ಧ ಮಾಡಿದ ಕೇತಮಲ್ಲ ಎಂಬ ವ್ಯಕ್ತಿಯ ಮರಣ ಮತ್ತು ಹೊಯ್ಸಳ ಶೆಟ್ಟಿಯ ಮಗ ಹೊನ್ನಿಶೆಟ್ಟಿ ತಮ್ಮ ಜೀವಿಯ ಬಗೆಯ ಪಂಣಾಯ್ಕನ ಬಗ್ಗೆ ಉಲ್ಲೇಖ ಮಾಡಲಾಗಿದೆ.

ಹನುಮನಹಳ್ಳಿ ಪಾಳು ಈಶ್ವರ ದೇವಸ್ಥಾನದ ಪಕ್ಕದಲ್ಲಿರುವ ಒಂದನೆಯ ವೀರಗಲ್ಲು 12– 13ನೇ ಶತಮಾನಕ್ಕೆ ಸೇರಿದ್ದು, ಮರಾಠಮ್ಮನ ಮಗನಾದ ಮೊಮ್ಮಯ್ಯನ ವೀರಮರಣದ ಬಗ್ಗೆ ಮತ್ತು ಕೇತಿಗಂಗನಿಗೆ ಮಾವಿನಕೆರೆಯ ಮಹಾಜನರ ಮುಖಂಡರಾದ ಹರಿಯಾಣ ಮತ್ತು ಸುರಯ ಎಂಬುವವರು ದನ–ಕರುಗಳನ್ನು ಲೂಟಿ ಮಾಡುವ ಸಂದರ್ಭದಲ್ಲಿ ಮರಣ ಹೊಂದಿದ್ದರು ಎಂದು ಉಲ್ಲೇಖಿಸಿದೆ. ಅದೇ ಸ್ಥಳದಲ್ಲಿರುವ 2ನೇ ವೀರಗಲ್ಲು ಮಾದವಡೆಯ ಮಗನಾದ ಬಾಚೆಯನಾಯಕನ ಮರಣದ ಉಲ್ಲೇಖ. ಈ ಸ್ಮಾರಕ ಶಿಲ್ಪವನ್ನು ಮಸಣನಾಯಕನು ನಿರ್ಮಿಸಿದ್ದಾನೆ. ಅದೇ ಸ್ಥಳದಲ್ಲಿರುವ 3ನೇ ವೀರಗಲ್ಲು ಹೊಯ್ಸಳರ ರಾಜನಾಗಿದ್ದ ವಿಜಯಾದಿತ್ಯ ಹೊಯ್ಸಳದೇವನ ಆಳ್ವಿಕೆಯ ಕಾಲಕ್ಕೆ ಸೇರಿದೆ. ತರಣೆಯಾದ ಮೈದವೆಗಡೆ

[4] ಕ್ಷೇತ್ರಕಾರ್ಯ

ಬರುವ ದಾರಿಯಲ್ಲಿ ಹಳ್ಳಕ್ಕೆ ಬಿದ್ದು ಮರಣ ಹೊಂದಿದ ಇವನ ನೆನಪಿಗಾಗಿ ಬಟ್ಟೆಯ ನಾಯಕನು ನಿರ್ಮಿಸಿದ ವೀರಗಲ್ಲು. ಜೊತೆಗೆ ಈ ಸ್ಥಳಕ್ಕೆ ಒಂದು ದೇವಾಲಯ ನಿರ್ಮಿಸಿ ಆ ದೇವಾಲಯಕ್ಕೆ ಎರಡು ಸಲಗ ಮತ್ತು ಕೊಳಗ ಭೂಮಿಯನ್ನು ದಾನವಾಗಿ ನೀಡಲಾಗಿದೆ. ತವನಂದಿಯ ಮಲೇಮಾದೇಶ್ವರ ದೇವಸ್ಥಾನದ ಹಿಂದಿರುವ 3ನೇ ವೀರಗಲ್ಲು 13ನೇ ಶತಮಾನಕ್ಕೆ ಸೇರಿದ್ದು, ಮರಹರು ತವನಂದಿಯ ಪಶುಸಂಗ್ರಹಣ ಕೊಠಡಿಯ ಮೇಲೆ ಆಕ್ರಮಣ ಮಾಡಿ ವಶಪಡಿಸಿಕೊಳ್ಳುತ್ತಾರೆ. ಇವರ ಮೇಲೆ ಪ್ರತಿಕ್ರಮಣ ಮಾಡಿದ ಮಾದಿಗೌಡನ ಮಗ ಮಾಯ್ಯ ಎಂಬುವವರನ್ನು ಪಶುಸಂಗ್ರಹಣ ಕೊಠಡಿಯನ್ನು ಪುನಃ ತನ್ನ ವಶಕ್ಕೆ ತೆಗೆದುಕೊಳ್ಳುತ್ತಾನೆ. ಅದೇ ಸಮಯದಲ್ಲಿ ಅಕಾಲಿಕ ಮರಣಕ್ಕೆ ಈಡಾಗುತ್ತಾನೆ. ಅದೇ ಸಮಯದಲ್ಲಿ ಹೊಯ್ಸಳರಾಜ ಸೋಮೇಶ್ವರ ರಾಜ್ಯಭಾರ ಮಾಡುತ್ತಿರುತ್ತಾನೆ. ಮಾಯ್ಯನ ಸ್ಮರಣೆಗೋಸ್ಕರ ಈ ಸ್ಮಾರಕ ಶಿಲ್ಪವನ್ನು ನಿರ್ಮಿಸಲಾಗಿದೆ. ತೇರಣ್ಯ ಈಶ್ವರ ದೇವಸ್ಥಾನದ ಕಟ್ಟೆಗೆ ಕಟ್ಟಿರುವ ವೀರಗಲ್ಲು ಹೊಯ್ಸಳರ ರಾಜ ವೀರಬಲ್ಲಾಳನಿಗೆ ಸಂಬಂಧಿಸಿದೆ. ದೊಡ್ಡಕುಂಟೆ ಈಶ್ವರ ದೇವಸ್ಥಾನದ ಎದುರು ನಿಂತಿರುವ ವೀರಗಲ್ಲು 13ನೇ ಶತಮಾನಕ್ಕೆ ಸೇರಿದ ಯಾವುದೇ ಮಾಹಿತಿ ಇಲ್ಲ.

ಲಕ್ಕೂರಿನ ಆಂಜನೇಯ ದೇವಸ್ಥಾನದ ಬಳಿ ಇರುವ ವೀರಗಲ್ಲು ಊರಿನ ಗೌಡನಿಗೆ ಸಂಬಂಧಿಸಿದೆ. ತವನಂದಿ ಮಳೆಮಲ್ಲೇಶ್ವರ ದೇವಸ್ಥಾನದ ಹಿಂದಿರುವ 1ನೇ ವೀರಗಲ್ಲು ಹೊಯ್ಸಳ ಸಾಮ್ರಾಜ್ಯದ ಸಾಮ್ರಾಟನಾದ ಸೋಮೇಶ್ವರನ ರಾಜ್ಯಭಾರಕ್ಕೆ ಒಳಪಟ್ಟಿದ್ದು, ಸೋಮಾಜಿಯ ಮಗನಾದ ಬಯುರಾಜೀಯು ತನ್ನ ತಂದೆಯ ವೀರಮರಣದ ನೆನಪಿಗಾಗಿ ನಿರ್ಮಿಸಿದನು. ಬಾಗಿವಾಳು ರಾಮೇಶ್ವರ ದೇವಸ್ಥಾನ ಎಡಕ್ಕೆ ನಿಲ್ಲಿಸಿರುವ 3ನೇ ವೀರಗಲ್ಲು ಕ್ರಿ.ಶ. 1303 ಏಪ್ರಿಲ್ 18 ಹೊಯ್ಸಳರ ರಾಜ ವೀರಬಲ್ಲಾಳನ ಕಾಲದ್ದು, ಬೆಮತುರದುರ್ಗಾದಲ್ಲಿ ರಾಜ್ಯಭಾರ ಮಾಡುತ್ತಿದ್ದ ವೀರಬಲ್ಲಾಳನು ಮೈದುನ ಸೋಮಯವಣ್ಣಾನಾಯಕ, ಸೇಪುಣಮಲ್ಲಯ್ಯನಾಯಕನಾದ ಕಂಪಿಲದೇವನು ಹೊಳೆಲ್ಕೆರೆಗೆ ಸಾಗುತ್ತಿರುವಾಗ ಸೋಮಯನಾಯಕನು ಮುನ್ನುಗ್ಗಿ ಯುದ್ಧ ಮಾಡಿ ಮರಣ ಹೊಂದುತ್ತಾನೆ. ಇವನ ವೀರತ್ವವನ್ನು ಈ ಸ್ಮಾರಕ ಶಿಲ್ಪದಲ್ಲಿ ಹೊಗಳಲಾಗಿದೆ. ಈ ಸ್ಮಾರಕ ಶಿಲ್ಪವನ್ನು ಯೇಚೋಜನ ಮಗ ಸಿದ್ದಯ್ಯನು ಅವನ ಸ್ಮರಣೆಗೋಸ್ಕರ ನಿರ್ಮಿಸಿದ್ದಾನೆ. ಅದೇ ಸ್ಥಳದಲ್ಲಿರುವ ನಾಲ್ಕನೇ ವೀರಗಲ್ಲು ಕ್ರಿ.ಶ. 1306 ನವೆಂಬರ್ 7 ಹೊಯ್ಸಳರ ರಾಜ ವೀರಬಲ್ಲಾಳನ ಕಾಲದ್ದು. ಚಾಕ್ಕೋಜನ ಮಗ ಮಲ್ಲೋಜನು ಈ ಸ್ಮಾರಕವನ್ನು ನಿರ್ಮಿಸುತ್ತಾನೆ. ಏಕೆಂದರೆ ಬಾಗಿವಾಳು ಗ್ರಾಮದ ಬಗ್ಗೆ ಉಲ್ಲೇಖಿಸಲಾಗಿದೆ. ಅದೇ ಸ್ಥಳದಲ್ಲಿರುವ 1ನೇ ವೀರಗಲ್ಲು ಕ್ರಿ.ಶ. 1319 ಸೆಪ್ಟೆಂಬರ್ 10 ಹೊಯ್ಸಳರ ರಾಜ ವೀರಬಲ್ಲಾಳನ ಕಾಲಕ್ಕೆ ಸೇರಿದ್ದು, ಸಿಂಗಯ್ಯ ದಾಣ್ನಾಯಕನ ಮಗ ಸೋಮಯ್ಯ ಮಲ್ಲಿತಮ್ಮನ ವೀರಮರಣ ಸ್ಮರಣಾರ್ಜಿತವಾಗಿ ನಿರ್ಮಾಣ ಹಾಗೂ ಸ್ಮಾರಕ ಶಿಲ್ಪವು ಅರಿಕೆಯ ನಾಯಕನ ಬಗ್ಗೆ ಉಲ್ಲೇಖಿಸಿದೆ. ಅದೇ ಸ್ಥಳದಲ್ಲಿರುವ 2ನೇ ವೀರಗಲ್ಲು ಕ್ರಿ.ಶ. 1322 ನವೆಂಬರ್ 19 ಹೊಯ್ಸಳರ ರಾಜ ವೀರಬಲ್ಲಾಳನ ಕಾಲದಲ್ಲಿ ಕಣ್ಣೂರಿನ ಪಾಂಪ್ಯರ ರಾಜನಾಗಿದ್ದ ವೀರಪಾಂಡ್ಯನಿಗೆ ಸೇವಕನಾಗಿದ್ದ ಸಮಯದಲ್ಲಿ ಅವನ ಪರವಾಗಿ ಯುದ್ಧ ಮಾಡುತ್ತಿದ್ದ ವೀರಬಲ್ಲಾಳನ ತಂಗಿಯ ಗಂಡ ಸೋಮಯ್ಯ ದಂಡನಾಯಕನ ಮಗ ಸಿಂದೆಯದಣ್ಣಾನಾಯಕನ ಬಗ್ಗೆ ಹಾಗೂ ವೀರಪಾಂಡ್ಯನ ಮಕ್ಕಳಾದ ಸಮುದ್ರಪಾಂಡ್ಯ ಮತ್ತು ಪಾರಕಪಾಂಡ್ಯ ಸಿಂಗೆಯದಕಣ್ಣಾನಾಯಕನನ್ನು, ಅರಿಕೆಯ ದಣ್ಣಾನಾಯಕನೆಂದು ಹೇಳಲಾಗಿದೆ. ಹೀಗೆ ಹೊಳೆನರಸಿಪುರ ಪ್ರದೇಶದ ಸ್ಮಾರಕ ಶಿಲ್ಪಗಳನ್ನು ಕುರಿತು ಅಧ್ಯಯನ ಮಾಡಿಲಾಗಿದೆ.

**ಪರಾಮರ್ಶನ ಗ್ರಂಥಗಳು**


- ಅಭಿಶಂಕರ್ (ಸಂ.) (1971). *ಹಾಸನ್ ಗ್ಯಾಜೆಟಿಯರ್.* ಕರ್ನಾಟಕ ಸರ್ಕಾರ.
- ಚಂದ್ರಶೇಖರ್ ಧೂಳೇಕರ್. (1978). *ಹೊಳೆನರಸೀಪುರ ತಾಲೂಕಿನ ಇತಿಹಾಸ.* ನಂದಿನಿ ಪ್ರಕಾಶನ.
- ಚಿದಾನಂದಮೂರ್ತಿ ಎಂ. (1966). *ಕರ್ನಾಟಕ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಸಂಪುಟ–1. ಸಪ್ನ ಬುಕ್‌ಹೌಸ್.
- *ಎಫಿಗ್ರಾಫಿಯಾ ಕರ್ನಾಟಿಕಾ.* ಸಂಪುಟ–8 (1984). ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ.
- ಗೊರೂರು ಅನಂತರಾಜು. (2009). *ಹಾಸನ ಜಿಲ್ಲೆಯ ದೇವಾಲಯಗಳ ದರ್ಶನ.* ಹಾಸನ.
- ಸುಂಕಂ ಗೋವರ್ಧನ. (2012). *ಕನ್ನಡ ನಾಡಿನ ಕೋಟೆಗಳು.* ಇಳಾ ಮುದ್ರಣ.
- ತಿಪ್ಪೇರುದ್ರಸ್ವಾಮಿ. ಹೆಚ್. (1968). *ಕರ್ನಾಟಕ ಸಂಸ್ಕೃತಿ ಸಮೀಕ್ಷೆ.* ಡಿ.ವಿ.ಕೆ.ಮೂರ್ತಿ ಪ್ರಕಾಶನ.